ಗೂಢಾಚಾರರು ನಡೆದು ಬರುತ್ತಿದ್ದ ಸಣ್ಣ ರಸ್ತೆ ಈಗ ವಿಸ್ತೃತಗೊಂಡಿದೆ. ಇನ್ನೂ ಮೂರು ಕಿಲೋಮೀಟರ್ ಹಾದಿಯಿದೆ. ಎಲ್ಲರಿಗೂ ಒಂದು ಸರ್‌ಪ್ರೈಸಾಗಿ ಇದೋ ನಾನು ಬರುತ್ತಿದ್ದೇನೆ.

ಹಳ್ಳಿಯ ಗಡಿಯಲ್ಲಿ ಒಂದು ಪೊಲೀಸ್ ಜೀಪ್ ನಿಂತಿತ್ತು. ಒಬ್ಬ ಪೊಲೀಸ್ ನನ್ನನ್ನು ನಮ್ಮ ಟ್ಯಾಕ್ಸಿಗೆ ಕೈ ಅಡ್ಡ ಹಾಕಿ ಕಾರನ್ನು ಬದಿಗೆ ಸರಿಸಿಡಲು ಹೇಳಿದ. ನಾನು ಇಳಿದು ಆತನ ಬಳಿಗೆ ಹೋದೆ.

'ಎಲ್ಲಿಗೆ?' ಅವನು ಕೇಳಿದ.

ನಾನು ನನ್ನ ಊರಿನ ಹೆಸರು ಹೇಳಿದೆ. ಅಂಕಲ್‌ನ ಹೆಸರು ಹೇಳದೆ ಮನೆತನದ ಹೆಸರು ಹೇಳಿದೆ. ಗಲ್ಫ್ ಯುದ್ಧದಿಂದ ಎಲ್ಲವನ್ನು ಕಳೆದುಕೊಂಡಿದ್ದೇನೆಂದೂ, ಈಗ ನಾನೊಬ್ಬ ನಿರಾಶ್ರಿತನೆಂದೂ ಹೇಳಿದಾಗ ಪೊಲೀಸಿನವನಿಗೆ ಕುತೂಹಲ ಹೆಚ್ಚಾಯಿತು. ಒಂದು ವಿದೇಶಿ ಸಿಗರೇಟ್ ಅವನು ನನ್ನಿಂದ ಪಡೆದುಕೊಂಡ.

'ಆ ಕಡೆ ಈಗ ಹೋಗಬೇಡಿ' ಪೊಲೀಸಿನವನು ಎಚ್ಚರಿಸಿದ

'ಆ ಊರು ಈಗ ಸಮಸ್ಯೆಯ ಗೂಡಾಗಿದೆ.'

'ಏನಾಗಿದೆ ಅಲ್ಲಿ?'

'ಏನೇನೋ ಆಗಿದೆ' ಎಂದು ಹೇಳಿ ಮುಗಿಸುವಷ್ಟರಲ್ಲಿ ಊರಿನ ಕಡೆಯಿಂದ ಒಂದು ಪೊಲೀಸ್ ಜೀಪು ಬಂತು. ಅದರ ಹಿಂದಿನಿಂದ ಸೈರನ್ ಮೊಳಗಿಸುತ್ತಾ ಒಂದು ಆಂಬುಲೆನ್ಸು ಓಡೋಡಿ ಬಂತು. ಬಂದ ವೇಗದಲ್ಲಿಯೇ ಅದು ನಗರದತ್ತ ತರಾತುರಿಯಿಂದ ಹೊರಟು ಹೋಯಿತು.

'ಸರ್, ನಿಜವಾಗಿಯೂ ಏನಾಗಿದೆ, ಸ್ವಲ್ಪ ವಿವರವಾಗಿ ಹೇಳ್ತೀರ?'

ಪೊಲೀಸಿನವನು ಬೊಟ್ಟು ಮಾಡಿ ತೋರಿಸಿದತ್ತ ನೋಡಿದೆ. ದೂರದಲ್ಲೆಲ್ಲೋ ಬೆಂಕಿ ಹೊತ್ತಿ ಉರಿಯುವಂತೆ ಭಾಸವಾಯಿತು. ಬೆಳದಿಂಗಳ ಪುನೀತ ವಲಯದಲ್ಲಿ ಕಡು ಕಪ್ಪಿನ ದಟ್ಟವಾದ ಹೊಗೆಯ ಸುರುಳಿ ವಿಷಕುಂಭದಂತೆ ತಂಗಿ ನಿಂತಿತ್ತು.

'ಒಂದು ವಾರದಿಂದ ಹೊಗೆಯಾಡುತ್ತಿತ್ತು. ಇವತ್ತು ಬೆಳಗ್ಗಿನ ಜಾವದಿಂದ ಹೊತ್ತಿ ಉರಿಯುತ್ತಿದೆ. ಹದಿನೆಂಟು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈಗ ಹೋದ ಅಂಬುಲೆನ್ಸ್‌ನಲ್ಲೂ ನಾಲ್ಕೈದು ಮಂದಿ ಇರಬಹುದು. ಅರವತ್ತಕ್ಕೂ ಹೆಚ್ಚಿನ ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಲಾಕಪ್ಪಿನಲ್ಲಿ ಸ್ಥಳವಿಲ್ಲದೆ ಇರೋದ್ರಿಂದ ಕೆಲವರನ್ನು ವರಾಂಡದಲ್ಲಿ ಕೂರ್ಸಿದ್ದೀವಿ. ಊಟ ಕೊಡದೇ ಇದ್ದಿದ್ದಕ್ಕೆ ಎ.ಎಸ್.ಐ. ಮೇಲೆ ಹಲ್ಲೆ ಮಾಡಿದ್ದಾರೆ'.

'ನಿಜವಾಗಿ ನಡೆದಿದ್ದಾದರೂ ಏನು ಸರ್?'

'ಗುಂಪು ಜಗಳ. ಇನ್ನೇನು ತಾನೆ ಹೇಳಲು ಸಾಧ್ಯ?'

ಪೊಲೀಸಿನವನು ಒಬ್ಬ ಕಥೆಗಾರನಾಗಿರಬೇಕಿತ್ತು. ಗುಂಪು ಘರ್ಷಣೆ ಕಣ್ಣಿಗೆ ಕಟ್ಟುವಂತೆ ಹೇಳಿ ಮುಗಿಸಿದ್ದ. ಅದು ಒಳ್ಳೆಯದೇ ಆಯಿತೆನಿಸಿತು. ಅವೆಲ್ಲಾ ನನಗೆ ಗೊತ್ತಿಲ್ಲದೆ ಇರುವ ವಿಷಯ ಅಲ್ಲ. ಹೊಸ ಎಪಿಸೋಡುಗಳನ್ನು ಆಕಾಂಕ್ಷಭರಿತವಾಗಿ ವರ್ಣರಂಜಿತವಾಗಿ ಹೇಳಿದ. ಕಥೆಯ ಸ್ವಾರಸ್ಯ ಕೆಡದಂತೆ, ಕತ್ತಲೆಯಲ್ಲಿ ನಡೆದುಬಂದ ಒಬ್ಬ ಯುವಕನಿಗೆ ಲಾಠಿ ರುಚಿ ತೋರಿಸಿ ಜೀಪಿನ ಒಳಗೆ ಕೊಂಡೊಯ್ದು.

ಹೊಸ ಎಪಿಸೋಡುಗಳು ನನ್ನ ಪ್ರಕಾರ ಬೆಂಕಿ ಮಳೆಯಂತಿತ್ತು. ಅಂಕಲ್ ಮತ್ತು ಸುಮಕ್ಕಂದಿರಲ್ಲ ಈಗಿನ ಎದುರಾಳಿಗಳು – ಅಂಕಲ್ ಮತ್ತು ಶ್ರೀದೇವಿ. ಸುಮಕ್ಕ ರಾಜಕೀಯದಿಂದ ದೂರವಾಗಿ ಅಡುಗೆಯಲ್ಲಿ ನೈಪುಣ್ಯ ಸಾಧಿಸಿದ್ದಾರೆ. ಬಿಡುವಿನ ವೇಳೆಯಲ್ಲಿ ತರಕಾರಿ ಬೆಳೆಯುತ್ತಾರೆ. ಅವರಿಗೆ ಬದಲಾಗಿ ಶ್ರೀದೇವಿ ಗ್ರೂಪ್‌ನ ಕೆಲಸ ಕಾರ್ಯಗಳನ್ನು ವಹಿಸಿಕೊಂಡಿದ್ದಾಳೆ.

'ಫ್ರೆಡ್ಡಿ ಎಂಬುವವರೊಬ್ಬರು ಈ ಗುಂಪು ಘರ್ಷಣೆಯಲ್ಲಿದ್ದಾರೆಯೇ?'

'ಯಾರು ಫ್ರೆಡ್ಡೀನಾ? ಓ... ಗೊತ್ತಾಯಿತು. ಫ್ರೆಡರಿಕ್ ಅಲ್ಲವಾ? ಅವನು ಲಕ್ವ ಹೊಡೆದು ಮಲಗಿದ್ದಲ್ಲಿಯೇ ಬಿದ್ಕೊಂಡಿದ್ದಾನೆ. ಲಂಡನ್, ನ್ಯೂಯಾರ್ಕ್ ಅಂತ ಅನೇಕ ಕಡೆ ಕರ್ಕೊಂಡ್ಹೋದ್ರು. ಈಗ ಯಾವುದೋ ಆಯುರ್ವೇದ ಟ್ರೀಟ್‌ಮೆಂಟ್ ತಗೊಳ್ತಿದ್ದಾನೆ'. ನೆಮ್ಮದಿಯೆನಿಸಿತು. ಸದ್ಯ ಶ್ರೀದೇವಿಯ ಸುತ್ತ ಒಬ್ಬ ತಲೆಹಿಡುಕನ ಕಮಟು ವಾಸನೆ ಇರುವುದಿಲ್ಲವಲ್ಲ.

'ಸರಿ, ನಾನು ಆ ಹುಡುಗನನ್ನೊಮ್ಮೆ ವಿಚಾರಿಸ್ತೀನಿ. ಅದರ ನಂತರ ನಮ್ಮ ಮಾತು ಮುಂದುವರಿಸೋಣ, ಪ್ರೆಸಿಡೆಂಟರದ್ದೋ ಮಗಳದ್ದೋ, ಗೂಢಾಚಾರನಿರಬೇಕೆನಿಸುತ್ತದೆ.'

ಅವನು ಜೀಪಿನ ಒಳಗೆ ಹೋದ. ನಾನು ತುಂಬ ಗಾಬರಿಯಿಂದ ನಿಂತಿದ್ದೆ. ಈ ಪರಿಸ್ಥಿತಿಯಲ್ಲಿ ಊರಿಗೆ ಹೋದರೆ...? ಗುಂಪು ಘರ್ಷಣೆಯಲ್ಲಿ ನಾನು ಧುಮುಕಿದರೆ... ಹಳೆಯ ಕಥೆಗಿಂತಲೂ ಕೆಟ್ಟದಾಗಿ ಬಿಡಬಹುದು. ಇಬ್ಬರ ಉಮೇದುವಾರಿಕೆಯನ್ನು ಹಾಳು ಮಾಡಲು ಬಂದವನೆಂದು ಅವರಿಬ್ಬರು ಭಾವಿಸಬಹುದು. ಇಬ್ಬರೂ ಒಟ್ಟಿಗೆ ಅಥವಾ ಬೇರೆ ಬೇರೆಯಾಗಿ ನನ್ನ ಮೇಲೆ ಹಾರಿಹಾಯಬಹುದು. ಶ್ರೀದೇವಿಯ ಒಬ್ಬ ಗೂಢಾಚಾರ ಮಚ್ಚು ಬಿಟ್ಟಿದ್ದು ನನ್ನ ಹಿಂದೆ ಸುತ್ತುವುದನ್ನು ನನಗೆ ಕಲ್ಪಿಸಲು ಸಾಧ್ಯವಿರಲಿಲ್ಲ.

ಅಷ್ಟರಲ್ಲಿ ಯಾರೋ ಒಬ್ಬ ಉನ್ನತ ಪೊಲೀಸ್ ಅಧಿಕಾರಿಯ ವಾಹನವೊಂದು ಭರ್ರೆಂದು ಅಲ್ಲಿಗೆ ಓಡಿಬಂತು. ಕಾನ್‌ಸ್ಟೇಬಲ್ ಸ್ಟೈಲಾಗಿ ಠಾಕುಠೀಕಾಗಿ ನಿಂತು ಸೆಲ್ಯೂಟ್ ಹೊಡೆದ. ಅವರು ಮುಂದೆ ಹೋದರು. ಅದರ ಹಿಂದೆಯೋ ಒಂದು ಆಂಬುಲೆನ್ಸ್ ಮೊರೆಯುತ್ತಾ ಓಡಿಹೋಯಿತು.

'ಸರ್, ನೀವು ಇವತ್ತು ಆ ಕಡೆ ಹೋಗ್ಬೇಡಿ. ಟೌನ್‌ನಲ್ಲಿ ಒಳ್ಳೆಯ ಲಾಡ್ಜ್‌ಗಳಿವೆ. ಮೂರ್ನಾಲ್ಕು ದಿನಗಳು ಅಲ್ಲಿರಿ. ಆಮೇಲೆ ಬಂದು ನೋಡಿ. ಈಗ ಈ ಊರಿನಲ್ಲಿ ಅಷ್ಟೊಂದು ಸಮಸ್ಯೆಗಳಿವೆ. ಸಾಕಷ್ಟು ರೌಡಿಗಳು ಜೈಲಿನಿಂದ ಹೊರಬಂದಿದ್ದಾರೆ. ಅವರೆಲ್ಲಾ ಹೊಸಬರು. ನಿಮ್ಮನ್ನು ಗುರುತಿಸಲಾರರು. ಸುಖಾಸುಮ್ಮನೆ ಏಕೆ ಬಂದು ಚೂರಿಗೆ ಆಹಾರವಾಗ್ತೀರಿ? ಇವತ್ತು ನೀವು ಬರೋದು ಮನೆಯವರಿಗೇನಾದರೂ ಗೊತ್ತಾ?'

'ಇಲ್ಲ'

'ಹಾಗಾದರೆ ಕೆಲಸ ಸುಲಭ. ತಕ್ಷಣ ವಾಪಸ್ ಹೋಗಿ. ಉಮೇದುವಾರರ ನಿರ್ಣಯದ ತನಕ ಗುಂಪು ಜಗಳಗಳಿರುತ್ತವೆ. ಕ್ಯಾಂಡಿಡೇಟ್‌ನ ತೀರ್ಮಾನದ ನಂತರ ಎಲ್ಲವೂ ತಣ್ಣಗಾಗುತ್ತದೆ. ಸಮಸ್ಯೆನೂ ಬಗೆಹರಿದಂತಾಗುತ್ತದೆ. ಆಗ ನೀವು ಬರಬಹುದು'.

'ಉಮೇದುವಾರಿಕೆಗೆ ಹೆಚ್ಚಿಗೆ ಚಾನ್ಸ್ ಯಾರಿಗೆ ಅಂತೀರಾ?' ನಾನು ಕೇಳಿದೆ. ಅವನು ಕೆಟ್ಟದಾಗಿ ನಕ್ಕು, 'ಅಪ್ಪ ಓಲ್ಡ್‌ಮೆಷಿನ್, ಮಗಳು ಗಾಡಿ. ಅವಳನ್ನು ನಿಲ್ಲಿಸಿದರೆ ಗೆಲ್ಲೋದಂತೂ ಗ್ಯಾರಂಟಿ'.

ಪೊಲೀಸಿನವನ ನಗುವಿನಲ್ಲಷ್ಟೇ ಅಲ್ಲ ಅವನ ದೇಹ ಭಾಷೆಯಲ್ಲೂ ಅಶ್ಲೀಲತೆ ಇಣುಕುತ್ತಿತ್ತು. ಕಣ್ಣು ಮುಚ್ಚಿ ಕಪಾಳಕ್ಕೆ ಬಿಗಿಯಬೇಕೆನಿಸಿತು. ಆದರೆ...

ಒಬ್ಬ ವನಿತಾ ನಾಯಕಿಯ ಗಂಡನಾಗಿರಲು ಕೆಲವು ಅರ್ಹತೆಗಳಿರಬೇಕು. ಒಬ್ಬ ಎಂ.ಎಲ್.ಎ.ಗೂ ಮಂತ್ರಿಗೂ ಇರುವ ಗಡಿಬಿಡಿಯ ಪ್ರಯಾಣದಲ್ಲಿ ಒಬ್ಬ ಪೆದ್ದನಂತೆ ಪೆಟ್ಟಿಗೆಯನ್ನು ಹಿಡಿದು ಹಿಂದೆ ಹೋಗಬೇಕು. ಫ್ರೆಡ್ಡಿಯವರ ಕಾರಿನ ಢಿಕ್ಕಿಯಲ್ಲಿ ಪೆಟ್ಟಿಗೆ ಇಡುವಾಗ ಅವಳು ಹೇಳುತ್ತಾಳೆ.

'ಒಂದು ಆಟೋ ಹಿಡಿದು ಬನ್ನಿ'.

ನನಗೆ ವಾಕರಿಕೆ ಬಂದುಬಿಟ್ಟಿತ್ತು. ಆಗ ನನಗೆ ಸ್ಕಾಚ್‌ನ ನೆನಪಾಯಿತು. ಪೆಟ್ಟಿಗೆಯಿಂದ ಸ್ಕಾಚ್ ಹೊರತೆಗೆದಾಗ ನಿರ್ಧಾರವೊಂದಕ್ಕೆ ಬಂದೆ. ಅದರಂತೆ ಬಾಟಲಿಯನ್ನು ಪೊಲೀಸನವನತ್ತ ಚಾಚಿದೆ.

'ಇದು ಸ್ಕಾಚು' ಎಂದೆ.

ಅವನಿಗೆ ನಿಧಿ ಸಿಕ್ಕಂತಾಯಿತು. ಬಹುಶಃ ಆ ಬಡ ಪೊಲೀಸಿನವರು ಸ್ಕಾಚ್ ವಿಸ್ಕಿ ನೋಡುತ್ತಿರುವುದು ಅದೇ ಮೊದಲು ಅನಿಸಿತು.

ಅತ್ತ ಹೋದ ಆಂಬುಲೆನ್ಸ್ ತಿರುಗಿ ಬಂತು. ಆಂಬುಲೆನ್ಸ್‌ನ ಸುದ್ದಿಗಿಂತಲೂ ಅದರೊಳಗಿನಿಂದ ರೋದನೆಯ ಧ್ವನಿ ಕೇಳಿಸುತ್ತಿತ್ತು. ಪೊಲೀಸಿನವನ ಟಾರ್ಚ್‌ನ ಬೆಳಕಿನಲ್ಲಿ ಆಂಬುಲೆನ್ಸ್‌ನ ಬಾಗಿಲ ಕೆಳ ಸಂದಿಯಿಂದ ರಕ್ತ ತೊಟ್ಟಿಕ್ಕುತ್ತಿರುವ ಬಟ್ಟೆಯನ್ನು ಕಂಡೆ.

'ಇದು ಸದ್ಯಕ್ಕೆ ನಿಲ್ಲುವಂತೆ ಕಾಣಿಸುತ್ತಿಲ್ಲ' ಪೊಲೀಸಿನವನು ಹೇಳಿದ, 'ಆ ಕಲೆಕ್ಟರ್ (ಜಿಲ್ಲಾಧಿಕಾರಿ) ಇಲ್ಲಿಗೆ ಬಂದಿದ್ದರೆ...'

'ಯಾವ ಕಲೆಕ್ಟರ್?'

ಇನ್ನೂ ಬರೆಯಲು ತೊಡಗದ ಕಥೆಗಾರನಾದ ಪೊಲೀಸಿನವನು ತಕ್ಷಣ ಚುರುಕಾದ. ಇದು ಉತ್ತರಭಾರತದಲ್ಲಿ ನಡೆದ ಕಥೆ. ಅಲ್ಲಿಯೂ ಇದರಂತೆಯೇ ಒಂದು ಹಳ್ಳಿ. ಸದಾ ಗುಂಪು ಘರ್ಷಣೆ. ಅಸಲಿಗೆ ಎರಡು ಗುಂಪುಗಳ ನಡುವಿನ ಸಂಘರ್ಷವಲ್ಲ. ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳ ನಡುವಿನ ಘರ್ಷಣೆ. ಪ್ರಾರಂಭವಾದರೆ ತಕ್ಷಣ ನಿಲ್ಲುವುದಿಲ್ಲ. ಕೊನೆಗೆ ಸರ್ವಪಕ್ಷಗಳ ಸಭೆಯನ್ನು ಕರೆಯಲಾಯಿತು. ಸಮನ್ವಯ ಸಮಿತಿಯನ್ನು ರಚಿಸಿ ಚರ್ಚೆಗಳು ನಡೆದವು. ಸಭೆಯಲ್ಲೇ ಕದನವಿರಾಮವನ್ನು ಘೋಷಿಸಲಾಯಿತು. ಸಭೆಯ ಅಂತ್ಯದಲ್ಲಿ ಎರಡೂ ಪಕ್ಷಗಳ ನಾಯಕರುಗಳು ಮಂತ್ರಿಯ ಸುತ್ತಲೂ ನಿಂತು ಫೋಟೊ ತೆಗೆದು ಮರುದಿನ ಪತ್ರಿಕೆಯಲ್ಲಿ ಹಾಕಿಸಿದರು. ಇದು ಒಂದೆರಡು ತಿಂಗಳುಗಳ